# ಕಬಂಧ ಪ್ರವೃತ್ತಿ

‘ಒಬ್ಬನಿಗೆ ಎಷ್ಟು ಭೂಮಿ ಬೇಕು?’ ಎಂಬುದು ಟಾಲ್‌ಸ್ಟಾಯ್ ಅವರ ಒಂದು ಸಣ್ಣ ಕಥೆಯ ಶೀರ್ಷಿಕೆ. ಆ ಕಥೆಯ ನಾಯಕ ಒಬ್ಬ ಸಾಮಾನ್ಯ ಮನುಷ್ಯ. ಒಂದಿಷ್ಟು ಭೂಮಿಯನ್ನು ಉತ್ತು ಬಿತ್ತಿ, ಬಂದ ಉತ್ಪತ್ತಿಯಲ್ಲಿ ಸಂತೃಪ್ತ ಜೀವನ ನಡೆಸುತ್ತಿದ್ದ. ಯಾರೋ ಕೇಡಿಗರು ಆತನ ನೆಮ್ಮದಿ ಕೆಡಿಸುವ ಉದ್ದೇಶದಿಂದ, ದೂರದಲ್ಲೆಲ್ಲೋ ಅತ್ಯಂತ ಫಲವತ್ತಾಗಿರುವ ಭೂಮಿ  ಉಚಿತವಾಗಿ ದೊರೆಯುವುದೆಂದು ಹೇಳಿ, ಅವನ ಮನಸ್ಸಿನಲ್ಲಿ ದುರಾಶೆಯ ಬೀಜವನ್ನು ಬಿತ್ತಿದರು. ಆತ ಆ ಸ್ಥಳಕ್ಕೆ ಹೋದ, ನಿಜಕ್ಕೂ ಬಂಗಾರದಂಥ ಭೂಮಿ! ಅದನ್ನು ಉಚಿತವಾಗಿ ಪಡೆಯಬೇಕಾದರೆ ಒಂದು ವಿಚಿತ್ರ ಷರತ್ತನ್ನು ಪೂರೈಸಬೇಕಾಗಿತ್ತು. ಆ ಷರತ್ತಿನ ಪ್ರಕಾರ ಆತ ಸೂರ್ಯೋದಯದ ಸಮಯಕ್ಕೆ ಸರಿಯಾಗಿ ಒಂದು ಬೆಟ್ಟದ ತುದಿಯಿಂದ ಹೊರಟು, ಸೂರ್ಯಾಸ್ತಕ್ಕೆ ಮೊದಲು ಹೊರಟ ಜಾಗಕ್ಕೆ ಹಿಂದಿರುಗಿದರೆ, ಆತ ತಿರುಗಾಡಿದ ಭೂಮಿಯೆಲ್ಲವೂ ಆತನಿಗೆ ಉಚಿತವಾಗಿ ಸಿಗುತ್ತಿತ್ತು. ಆ ಮನುಷ್ಯ ಸೂರ್ಯ ಹುಟ್ಟುವ ಸಮಯಕ್ಕೆ ಸರಿಯಾಗಿ ಬೆಟ್ಟದ ತುದಿಯಿಂದೇನೋ ಹೊರಟ. ಇನ್ನಷ್ಟು, ಮತ್ತಷ್ಟು ಭೂಮಿಯನ್ನು ಪಡೆಯಬೇಕೆಂಬ ಅತೀ ಆಶೆಯಿಂದ ಸಂಜೆಯವರೆಗೂ ನಡೆದೇ ನಡೆದ. ಇನ್ನೇನು ಸೂರ್ಯ ಮುಳುಗಲಿದ್ದಾನೆ ಎಂಬ ಹಂತದಲ್ಲಿ, ಹೊರಟ ಜಾಗವನ್ನು ತಲುಪಲು ದೌಡಾಯಿಸಿದ; ಆಯಾಸ ತಾಳಲಾರದೇ, ಗುರಿ ಮುಟ್ಟುವ ಮೊದಲೇ, ಕುಸಿದುಬಿದ್ದು ತೀರಿಕೊಂಡ. ಆಗ ಅವನಿಗೆ ಬೇಕಾದುದು ಅವನ ಸಮಾಧಿಗಾಗಿ 6 ಅಡಿ ಉದ್ದ, 3 ಅಡಿ ಅಗಲದ ಭೂಮಿ ಮಾತ್ರ!



ಈ ಕಥೆಯ ಸಂದೇಶ ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾದರೂ ಇದರಿಂದ ಪಾಠ ಕಲಿಯುವವರು ತೀರಾ ವಿರಳ. ಬದುಕಲು ಎಷ್ಟು ಅಗತ್ಯವೋ ಅಷ್ಟಿದ್ದರೆ ಸಾಕು– ಎಂದು ತಮ್ಮ ಬಯಕೆಗಳಿಗೆ ಮಿತಿ ಹಾಕಿಕೊಂಡು ತೃಪ್ತರಾಗಿರುವವರು ಅಲ್ಲೊಬ್ಬರು, ಇಲ್ಲೊಬ್ಬರು ಮಾತ್ರ. ಇನ್ನಷ್ಟು ಮತ್ತಷ್ಟು ಬೇಕೆಂದು ತಳಮಳಗೊಳ್ಳುತ್ತಿರುವುದೇ ಮನುಷ್ಯನ ಜಾಯಮಾನ, ಸೃಷ್ಟಿಯಲ್ಲಿರುವ ಬೇರಾವ ಜೀವಿಗೂ ಮನುಷ್ಯನಂತೆ ಮಿತಿಮೀರಿ ಸಂಗ್ರಹಿಸುವ, ಕೂಡಿಡುವ ಹಪಾಹಪಿ ಇಲ್ಲ. ಭಗವಂತ ಮನುಷ್ಯನಿಗೆ ಶಕ್ತಿ, ಸೌಂದರ್ಯ, ಬುದ್ಧಿವಂತಿಕೆ– ಹೀಗೆ ಎಲ್ಲವನ್ನೂ ಕೊಟ್ಟರೂ ‘ತೃಪ್ತಿ’ಯನ್ನು ಮಾತ್ರ ಕೊಡಲಿಲ್ಲವಂತೆ. ಅದನ್ನು ಕೊಟ್ಟರೆ ಮನುಷ್ಯ ತನ್ನನ್ನೇ ಮರೆಯುತ್ತಾನೆ ಎಂದು ದೇವರಿಗೆ ಭಯವಂತೆ. ಇದು ಜಾರ್ಜ್ ಹರ್ಬರ್ಟ್ ಎಂಬ ಆಂಗ್ಲ ಕವಿ ತನ್ನದೊಂದು ಪದ್ಯದಲ್ಲಿ ಹೇಳಿರುವ ಮಾತು. ಮುಂದಿನ ಹತ್ತು ತಲೆಮಾರಿನವರು ಉಪಯೋಗಿಸಿದರೂ ಕರಗದಿರುವ ಆಸ್ತಿಯನ್ನು ಹೊಂದಿರುವವರೂ ಕೂಡ ಮತ್ತಷ್ಟು ಗಳಿಸುವ ಚಿಂತೆಯಲ್ಲಿ ಚಡಪಡಿಸುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಸಿಕ್ಕಿದುದನ್ನೆಲ್ಲ ತಮ್ಮ ಕಡೆಗೇ ಬಾಚಿಕೊಳ್ಳುವ ಈ ಗೀಳನ್ನು ‘ಕಬಂಧ ಪ್ರವೃತ್ತಿ’ ಎನ್ನಬಹುದು. ಕಬಂಧನಿಗೆ ತಲೆ ಕಾಲುಗಳಿರಲಿಲ್ಲ. ಅವನಿಗಿದ್ದುದು ಅಗಾಧವಾದ ಒಂದು ಹೊಟ್ಟೆ; ಅದರಲ್ಲೇ ಹರಿತವಾದ ಹಲ್ಲುಗಳಿದ್ದ ಒಂದು ದೊಡ್ಡ ಬಾಯಿ; ಜೊತೆಗೆ ಎರಡು ದೀರ್ಘ ಬಾಹುಗಳು! ಅವುಗಳ ಸಹಾಯದಿಂದ ಆತ ಪಶು, ಪಕ್ಷಿಗಳನ್ನೂ, ಮನುಷ್ಯರನ್ನೂ ಬಾಚಿ, ತಿಂದು ತೇಗುತ್ತಿದ್ದ. ಏನು ತಿಂದರೂ ತೃಪ್ತಿ ಮಾತ್ರ ಇರಲಿಲ್ಲ, ನಮ್ಮ ಕಾಲದ ಹಲವರಲ್ಲಿ ಇಂಥ ಕಬಂಧನೊಬ್ಬ ಅಡಗಿಕೊಂಡಿದ್ದಾನೆಂದು ಅನ್ನಿಸುವುದಿಲ್ಲವೇ? ಇಂಥವರಿಗೆ ‘Wealth is means to an end, not the end itself ’ ಎಂಬ ಮಾತು ಅರ್ಥವಾಗುವುದೇ ಇಲ್ಲ.

ಗಾಂಧೀಜೀಯವರ ಪ್ರಕಾರ ನಮ್ಮ ಅಗತ್ಯಕ್ಕಿಂತಲೂ ಹೆಚ್ಚಿನದನ್ನು ಕೂಡಿಡುವುದು ಕಳ್ಳತನಕ್ಕೆ ಸಮಾನವಾದ ಸಾಮಾಜಿಕ ಅಪರಾಧ. ‘ಮಾಗೃಧಃ ಕಸ್ಯಸ್ವಿದ್ಧನಮ್’ (ಯಾರ ಹಣಕ್ಕೂ ಆಶೆಪಡಬೇಡ) ಎಂಬ ಈಶೋಪನಿಷತ್ತಿನ ಎಚ್ಚರಿಕೆಯ ಮಾತೂ ಇದನ್ನೇ ಹೇಳುತ್ತದೆ. ಆದರೆ ಇಂಥ ಮಾತುಗಳನ್ನು ಕೇಳಿಸಿಕೊಳ್ಳುವ ಕಿವಿಗಳೇ ಅಪರೂಪವಾಗಿರುವುದು ದುರಂತವಲ್ಲವೇ?

■ ವೈನತೇಯ

## ಮಾತೇ ಮುತ್ತು

★ ಹೆಣ್ಣು ದೇವತೆ ಆದರೂ ವಿವಾಹ ಬಂಧನ ದೆವ್ವವೇ.

–ಲಾರ್ಡ್ ಬೈರನ್

★ ಮದುವೆ ಆದ ದಂಪತಿಗಳಲ್ಲಿ ಕನಿಷ್ಠ ಒಬ್ಬರಾದರೂ ಬೆಪ್ಪರಿರಲೇಬೇಕು.

–ಹೆನ್ರಿ ಫೀಲ್ಡಿಂಗ್

★ ಯಾವಾಗ ಮದುವೆ ಆಗಬೇಕು? ಯುವಕನಾದರೆ ಈಗಲೇ ಅಲ್ಲ; ಮುದುಕನಾದರೆ ಯಾವಾಗಲೂ ಅಲ್ಲ.

–ಫ್ರಾನ್ಸಿಸ್ ಬೇಕನ್

★ ಮದುವೆ ಆದವನಿಗೆ ಅನೇಕ ಕಷ್ಟಗಳಿವೆ. ಆದರೆ ಮದುವೆ ಆಗದವನಿಗೆ ಯಾವ ಸಂತೋಷವೂ ಇಲ್ಲ.

–ಸ್ಯಾಮುಯಲ್ ಜಾನ್‌ಸನ್

★ ಅನುಮಾನ ಒಳಬಂದ ಬಾಗಿಲಲ್ಲೇ ಪ್ರೇಮ ಹೊರಹೋಗುತ್ತದೆ.

–ಬ್ರಿಟನ್ ಗಾದೆ

★ ಮದುವೆ ಆದ ನಂತರವೂ ‘ಅಮ್ಮನ ಪುಟ್ಟ ಮಗ’ನಂತೆ ನಡೆಯುವ ಗಂಡ; ‘ಅಪ್ಪನ ಪುಟ್ಟ ಮಗಳಂತೆ’ ನಡೆಯುವ ಹೆಂಡತಿ ಮಧುರ ದಾಂಪತ್ಯಕ್ಕೆ ಗಂಡಾಂತರ ತರುತ್ತಾರೆ.

–ರಾಬರ್ಟ್ ಜೆ. ಮ್ಯಾಲಿಸ್ಟರ್

★ ಒಂದು ಬಾರಿ ಮದುವೆ ಆಗುವುದು ಕರ್ತವ್ಯ; ಎರಡು ಬಾರಿ ಆಗುವುದು ದಡ್ಡತನ; ಮೂರು ಬಾರಿ ಆಗುವುದು ಹುಚ್ಚು.

–ಡಚ್ ಗಾದೆ

★ ಸುಖ ಎಂದರೇನೆಂದು ಮದುವೆ ಆಗುವವರೆಗೆ ನನಗೆ ತಿಳಿದಿರಲಿಲ್ಲ; ನಂತರ ಕಾಲ ಮಿಂಚಿ ಹೋಗಿತ್ತು.

–ಯಹೂದಿ ಗಾದೆ

★ ಪ್ರೇಮದ ಕೊನೆಯ ದಿನ, ಮದುವೆಯ ಮೊದಲ ದಿನ ತಪ್ಪು ಮಾಡುವುದು ಕೈ ಅಲ್ಲ– ಬಾಯಿ.

–ಸ್ವಿಸ್ ಗಾದೆ

★ ಪ್ರೇಮ ನುಗ್ಗುವುದು ಗಂಡಸಿಗೆ ಕಣ್ಣಿನ ಮೂಲಕವಾದರೆ, ಹೆಂಗಸಿಗೆ ಕಿವಿಯ ಮೂಲಕ.

–ಪೋಲಿಷ್ ಗಾದೆ

★ ಪ್ರೇಮದ ಭುಜದ ಮೇಲೆ ರೆಕ್ಕೆಗಳಿದ್ದರೆ, ಮದುವೆಯ ಭುಜದಡಿ ಊರುಗೋಲುಗಳಿವೆ.

–ರಷ್ಯಾ ಗಾದೆ

★ ಮದುವೆ ಆದವನು ಪಶ್ಚಾತ್ತಾಪ ಪಡಬಹುದಾದರೂ, ಮದುವೆ ಆಗದವನು ಪಶ್ಚಾತ್ತಾಪ ಪಡುವುದು ತಪ್ಪದು.

–ಜೆಕ್ ಗಾದೆ

★ ನೋಡಲು ಚೆನ್ನಾಗಿದ್ದಾಳೆ ಎಂದು ಮದುವೆ ಆಗುವುದು, ಬಣ್ಣ ಚೆನ್ನಾಗಿದೆ ಎಂದು ಮನೆ ಕೊಂಡಂತೆಯೇ.

–ಸ್ಕಾಟಿಷ್ ಗಾದೆ

★ ಪ್ರೇಮ ಎಷ್ಟೇ ಉಜ್ವಲವಾಗಿರಲಿ, ಮದುವೆ ಅದನ್ನು ತಣ್ಣಗೆ ಮಾಡುತ್ತದೆ.

–ರಷ್ಯಾ ಗಾದೆ